ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

# ಕೆರೆಗಳು
## ಸಕಲ ಜೀವಿಗಳ ಜೀವಸೆಲೆಗಳು



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು



ಜನರ ಸಂಕಷ್ಟಗಳನ್ನು ನಿವಾರಿಸಿ ಸಂತಸ ಸಂಭ್ರಮ ಉಂಟು ಮಾಡುವುದೇ ಗೌರಿ-ಗಣೇಶ ಹಬ್ಬದ ಆಚರಣೆಯ ಮೂಲ ಆಶಯ. ಈ ಆಶಯಕ್ಕೆ ಅನುಗುಣವಾಗಿ ಹಾಗೂ ಜಲಮೂಲಗಳನ್ನು ಮಾಲಿನ್ಯವಾಗದಂತೆ ಮತ್ತು ಜಲಚರಗಳಿಗೆ ಅಪಾಯವಾಗದಂತೆ ಪರಿಸರಸ್ನೇಹಿ ಗಣೇಶ ಹಬ್ಬವನ್ನು ಆಚರಿಸೋಣ, ಸಂತಸದಿಂದ ಸಂಭ್ರಮಿಸೋಣ. ಕೆರೆಗಳು ನಮ್ಮ ಜೀವಸೆಲೆಗಳು. ಕೆರೆಗಳ ಮಾಲಿನ್ಯದಿಂದಾಗಿ ನಮ್ಮ ಬದುಕಿಗೆ ಮಾರಕವಾಗಬಹುದು. ಈ ನಿಟ್ಟಿನಲ್ಲಿ ಇಲಾಖೆಯ ಮಾರ್ಗಸೂಚಿಯನ್ನು ಅನುಸರಿಸಿ ಹಬ್ಬ ಆಚರಿಸಿ, ನಮ್ಮೊಂದಿಗೆ ಸಹಕರಿಸಿ.

॥ ನಾಡಿನ ಸಮಸ್ತ ಜನತೆಗೆ
ಸರ್ವತ್ರ ಮಂಗಳಪ್ರದಾಯಕ
**ಗೌರಿ–ಗಣೇಶ ಹಬ್ಬದ ಶುಭಾಶಯಗಳು** ॥

**- ಎನ್.ಎಸ್. ಭೋಸರಾಜು**
ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು, ಕರ್ನಾಟಕ ಸರ್ಕಾರ



### ಪರಿಸರ ಸ್ನೇಹಿ ಆಚರಣೆ

- ಸಂಭ್ರಮಾಚರಣೆಯಿಂದ ಪರಿಸರಕ್ಕೆ ಹಾನಿಯುಂಟಾಗದಿರಲಿ.
- ಮಣ್ಣಿನಿಂದ ರೂಪಿಸಿದ, ನೈಸರ್ಗಿಕ ಬಣ್ಣಗಳನ್ನು ಒಳಗೊಂಡ ಚಿಕ್ಕ ಮೂರ್ತಿಗಳನ್ನು ಖರೀದಿಸಿ. ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಮಾಡಿದ ಗಣಪನ ವಿಗ್ರಹಗಳನ್ನು ಖರೀದಿಸಬೇಡಿ.
- ಅಲಂಕಾರಕ್ಕೆ ಪ್ಲಾಸ್ಟಿಕ್ ಹೂವುಗಳು, ಥರ್ಮಾಕೋಲ್ ಅಥವಾ ಲೋಹಗಳನ್ನು ಬಳಸಬೇಡಿ.
- ಕೇವಲ ನೈಸರ್ಗಿಕ ಹೂವುಗಳು, ಹತ್ತಿ, ಪೇಪರ್ ಮತ್ತು ಇನ್ನಿತರ ಪರಿಸರ ಸ್ನೇಹಿ ಅಲಂಕಾರಿಕ ವಸ್ತುಗಳನ್ನೇ ಬಳಸಿ.
- ಕೆರೆ / ಹೊಂಡಗಳಲ್ಲಿ ಕೃತಕ ರಾಸಾಯನಿಕ / ತೈಲ ಬಣ್ಣ ಲೇಪಿತ ಮೂರ್ತಿಗಳನ್ನು ವಿಸರ್ಜಿಸಬೇಡಿ.

### ನಮ್ಮ ಬದ್ಧತೆಗಳು

- ಬಣ್ಣ ರಹಿತ / ಅರಿಶಿಣ ನಿರ್ಮಿತ ಚಿಕ್ಕ ಮೂರ್ತಿ.
- ಮೂರ್ತಿಗಳ ವಿಸರ್ಜನೆಗೆ ನೀರು ತುಂಬಿರುವ ಬಕೆಟ್ ಅಥವಾ ಅದಕ್ಕಾಗಿ ಗೊತ್ತುಪಡಿಸಿರುವ ಕಲ್ಯಾಣಿಗಳು ಅಥವಾ ಮಾಲಿನ್ಯ ನಿಯಂತ್ರಣ ಮಂಡಳಿಯು ವ್ಯವಸ್ಥೆಗೊಳಿಸಿರುವ ಸಂಚಾರಿ ವಾಹನಗಳು.
- ವಿಸರ್ಜಿಸುವುದಕ್ಕಿಂತ ಮೊದಲು ಹೂವು, ಎಲೆ ಮತ್ತು ಅಲಂಕಾರಿಕ ವಸ್ತುಗಳನ್ನು ಮೂರ್ತಿಯಿಂದ ಬೇರ್ಪಡಿಸುವುದು. ಇಲ್ಲದಿದ್ದರೆ ಇದರಿಂದ ಜಲಚರಗಳಿಗೆ ಹಾನಿಯುಂಟಾಗುತ್ತದೆ.

**ಗಣೇಶ ವಿಗ್ರಹಗಳನ್ನು ನಿಗದಿಪಡಿಸಿರುವ ಸ್ಥಳಗಳಲ್ಲಿ ವಿಸರ್ಜಿಸಿ**





**ನೆನಪಿಡಿ :** ರಾಷ್ಟ್ರೀಯ ನಿರ್ದೇಶನಗಳನ್ನು ಹಾಗೂ ರಾಜ್ಯ ಸರ್ಕಾರದ ಆದೇಶ / ಮಾರ್ಗಸೂಚಿ ಉಲ್ಲಂಘಿಸಿದಲ್ಲಿ ಕಾನೂನು ಕ್ರಮ ಎದುರಿಸಬೇಕಾಗುವುದು.

**ಕಾರ್ಯದರ್ಶಿ**
ಸಣ್ಣ ನೀರಾವರಿ ಮತ್ತು
ಅಂತರ್ಜಲ ಅಭಿವೃದ್ಧಿ ಇಲಾಖೆ

ಸಾರ್ವಜನಿಕ ಹಿತಾಸಕ್ತಿಯಿಂದ ಪ್ರಕಟಣೆ :
**ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ**
ಬೀಜ ಭವನ, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು-560024. ದೂರವಾಣಿ ಸಂಖ್ಯೆ: 080 23513711